ಎಂ.ವಿ.ಸಿ. 720/2023, ಆರ್.ಡಬ್ಲ್ಯೂ.1 ಹೆಸರುಃ ಪೊಣ್ಣಚ್ಚ

**ದಿಃ10-06-2026 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎಸ್.ವಿ. ವಕೀಲರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

2 ನೇ ಎದುರುದಾರ ಸಂಸ್ಥೆಯವರು ನನಗೆ ನೀಡಿರುವ ಅಧಿಕಾರ ಪತ್ರವನ್ನು ಹಾಜರುಪಡಿಸಿದಸ್ದು ನಿ.ಆರ್.1 ಎಂದು ಗುರುತಿಸಲಾಯಿತು. ಕೆ.ಎ.30/ಎಂ.9562 ರ ವಾಹನದ ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್.2 ಎಂದು ಗುರುತಿಸಲಾಯಿತು.

**ಪಾಟೀ ಸವಾಲು : ಅರ್ಜಿದಾರರ ಪರ ಶ್ರೀ ಪಿ.ಆರ್. ವಕೀಲರಿಂದ**

2. ನಾನು ಪೊಲೀಸ್ ದಾಖಲಾತಿಗಳ ಆಧಾರದಲ್ಲಿ ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ. ನಾನು ಅಪಘಾತವನ್ನು ಖುದ್ದಾಗಿ ನೋಡಿಲ್ಲ ಎಂದರೆ ಸರಿ. ತನಿಖಾಧಿಕಾರಿಗಳು ಅಪಘಾತದ ಕುರಿತು ತನಿಖೆ ಮಾಡಿ ಕೆ.ಟಿ.ಸಂತೋಷ್ ಕುಮಾರ್ ಬಿನ್ ತಿಪ್ಪೇಸ್ವಾಮಿ ರವರ ತಪ್ಪಿನಿಂದ ಅಪಘಾತ ಏರ್ಪಟ್ಟಿರುತ್ತದೆ ಎಂದು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಸುಳ್ಳಾಗಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದಾರೆ ಎಂದು ಹೇಳುತ್ತಾರೆ. 2 ನೇ ಎದುರುದಾರರು ನಿಪಿ.8 ರ ದೋಷಾರೋಪಣ ಪಟ್ಟಿಯ ಕುರಿತು ಪಕ್ಷಗಾರರಲ್ಲದ ಕಾರಣ ಸದರಿ ದೋಷಾರೋಪಣ ಪಟ್ಟಿಯ ಕುರಿತು ಯಾವುದೇ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿಲ್ಲ. ಪರಿಹಾರವನ್ನು ಪಾವತಿಸುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಕೆ.ಎ.30-ಎಂ.-9562 ರ ವಾಹನಕ್ಕೆ ವಿಮೆ ಎಂದರೆ ಸರಿ. ಅಪಘಾತದ ಸಮಯದಲ್ಲಿ ಸದರಿ ವಾಹನದ ಚಾಲಕನಿಗೆ ಚಾಲನಾ ಪರವಾನಗಿ ಇತ್ತು ಎಂದರೆ ಸರಿಯಲ್ಲ.

**ಪಾಟೀ ಸವಾಲು : 1 ನೇ ಎದುರುದಾರರ ಪರ ಶ್ರೀ ಎಸ್.ಎಸ್. ವಕೀಲರಿಂದ**

ಅಪಘಾತದ ಸಮಯದಲ್ಲಿ ಸದರಿ ವಾಹನವನ್ನು ಸಂತೋಷ್ ಕುಮಾರ್ ಬಿನ್ ತಿಪ್ಪೇಸ್ವಾಮಿ ರವರು ಚಾಲನೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಕೆ.ಎ.30-ಎಂ.-9562 ರ ವಾಹನದ ಮಾಲೀಕರಾದ 1 ನೇ ಎದುರುದಾರರು ಚಾಲನಾ ಪರವಾನಗಿಯನ್ನು ಹೊಂದಿದ್ದರು ಎಂದರೆ ಸರಿ. ಸಾಕ್ಷಿಗೆ 1 ನೇ ಎದುರುದಾರರಿಗೆ ಸಂಬಂಧಿಸಿದ ಚಾಲನ ಪರವಾನಗಿಯನ್ನು ತೋರಿಸಿದ್ದು, ಸಾಕ್ಷಿ ಒಪ್ಪಿಕೊಂಡ ಮೇರೆಗೆ ನಿ.ಆರ್.3 ಎಂದು ಗುರುತಿಸಲಾಯಿತು. ಪರಿಹಾರವನ್ನು ಪಾವತಿಸುವ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ತಕರಾರನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ